# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC : 208/2024**

**CW16**

**PW6**

| | | |
|---|---|---|
| ಸಾಕ್ಷಿಯ ಹೆಸರು | ಃ | ಲಕ್ಷ್ಮಣ್ |
| ತಂದೆ ಹೆಸರು | ಃ | ಮಂಜು |
| ಪ್ರಾಯ | ಃ | 61 ವರ್ಷ |
| ಉದ್ಯೋಗ | ಃ | ನಿವೃತ್ತ ಪಿ.ಎಸ್.ಐ. |
| ವಾಸ | ಃ | ಉಡುಪಿ |

ದಿನಾಂಕ : **31.10.2025** ರಂದು ಪಿಡಬ್ಲ್ಯೂ - 6 /ಸಿಡಬ್ಲ್ಯೂ - 16 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಾನು ದಿಃ 01.02.2023 ರಿಂದ 30.06.2024 ರವರೆಗೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 14.02.2024 ರಂದು ಸದರಿ ಪ್ರಕರಣದಲ್ಲಿ ತನಿಖೆಯನ್ನು ಮುಂ ದುವರಿಸಿವಂತೆ ವೃತ್ತ ನಿರೀಕ್ಷರು, ಕಾರ್ಕಳ ಇವರು ಇ ಮೇಲ್ ಮೂಲಕ ಸಂದೇಶವನ್ನು ಕಳುಹಿಸಿರುತ್ತಾರೆ.

CC 208/2024
CW16
PW6

ನಂತರ ನಾನು ಚಾಸಾ 13 ರವರಿಂದ ಕಡತವನ್ನು ಪಡೆದುಕೊಂಡು ಸ್ಥಳ ಪರಿಶೀಲನೆ ಮಾಡಲು ಅಧಿಕಾರಿಗಳಿಗೆ ಪತ್ರ ಬರೆದಿರುತ್ತೇನೆ. ದಿಃ 15.02.2024 ರಂದು ಘಟನಾ ಸ್ಥಳಕ್ಕೆ ಹೋಗಿ ಪಂಚರಾದಂತಹ ಚಾಸಾ 3 ಮತ್ತು 4 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 9 ರಿಂದ 10 ಗಂಟೆಯವರಿಗೆ ನಿಪಿ - 2 ರಂತೆ ಮಹಜರು ಮಾಡಿರುತ್ತೇನೆ. ಸದರಿ ಮಹಜರಿನಲ್ಲಿ ನನ್ನ ಸಹಿಯನ್ನು ಗುರುತಿಸಿದ್ದು, ನಿಪಿ - 2(ಬಿ) ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಕಾಂಕ್ರೀಟ ಮಿಕ್ಸರ್ ವಾಹನ ವನ್ನು ವಶಪಡಿಸಿಕೊಂಡಿರುತ್ತೇನೆ. ಹಾಗೂ ತಜ್ಞಾಧಿಕಾರಿಗಳು ನೀಡಿದಂತಹ ಮಾದರಿಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ - 3 ರಂತೆ ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿರುತ್ತೇನೆ. ನಿಪಿ - 4 ಮತ್ತು ನಿಪಿ - 5 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ನಿಪಿ - 3 ರಲ್ಲಿನ ನನ್ನ ಸಹಿಯನ್ನು ನಿಪಿ - 3(ಇ) ಎಂದು ಗುರುತಿಸಲಾಯಿತು. ಅದೇ ಚಾಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ 2 ರವರು ನಿಪಿ - 10 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ.

ನಂತರ ಅದೇ ದಿನ ಹೆಬ್ರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳಿ ನಿಪಿ - 9 ರಂತೆ ಮೃತ ಬಾಶಿಯವರ ಶವ ಮಹಜರು ಮಾಡಿರುತ್ತೇನೆ. ನನ್ನ ಸಹಿಯನ್ನು ನಿಪಿ - 9(ಎ) ಎಂದು ಗುರುತಿಸಲಾಯಿತು. ಮೃತರ ಮರಣೋತ್ತರ ಪರೀಕ್ಷೆ ಮಾಡಿಸುವಂತೆ ಚಾಸಾ 13 ರವರಿಗೆ ತಿಳಿಸಿರುತ್ತೇನೆ. ನಂತರ ಠಾಣೆಗೆ

ಹಿಂತಿರುಗಿ ವಶಪಡಿಸಿಕೊಂಡ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ವೈದ್ಯಾಧಿಕಾರಿಗಳು ನೀಡಿದ ರಕ್ತದ ಮಾದರಿಯನ್ನು ವಶಪಡಿಸಿಕೊಂಡ ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 17.02.2024 ರಂದು ಮೃತ ಬಾಶಿಯವರ ಶವ ಪರೀಕ್ಷಾ ವರದಿಯನ್ನು ವೈದ್ಯಾಧಿಕಾರಿಗಳಿಂದ ಪಡೆದುಕೊಂಡಿರುತ್ತೇನೆ. ಈಗಾಗಲೇ ಶವ ಪರೀಕ್ಷಾ ವರದಿಯನ್ನು ನಿಪಿ - 8 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ - 8(ಎ) ಎಂದು ಗುರುತಿಸಲಾಯಿತು. ದಿಃ 23.02.2024 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್.ಎಸ್.ಎಲ್ ಮಂಗಳೂರಿಗೆ ಕಳುಹಿಸಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ 17 ರವರಿಗೆ ವಹಿಸಿರುತ್ತೇನೆ.

<u>ಪಾಟೀ ಸವಾಲುಃ</u> ಶ್ರೀ ಪಿ.ಎ.ಎಸ್. 1 ನೇ ಆರೋಪಿ ಪರ ವಕೀಲರಿಂದಃ

ಈ ಪ್ರಕರಣದ ಫಿರ್ಯಾದಿಯು ಘಟನಾ ಸ್ಥಳದಿಂದ ಸುಮಾರು 60 ಕಿಲೋ ಮೀಟರ್ ದೂರದಲ್ಲಿ ಅಂದರೆ ಬೈಂದೂರಿನಲ್ಲಿ ವಾಸವಾಗಿದ್ದಾರೆ. ಫಿರ್ಯಾದಿಯು ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದಾರೆ. ಅದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ತಕ್ಷೀರು ಸಮಯದಲ್ಲಿ ಚಾಸಾ 1 ರವರು ಸ್ಥಳದಲ್ಲಿ ಇದ್ದರು ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ತಕೀರು ಸ್ಥಳದಲ್ಲಿ ನಾವು ಮಹಜರು ಮಾಡುವ

ಸಮಯದಲ್ಲಿ ಅಪಘಾತವಾದ ಬಗ್ಗೆ ರಕ್ತದ ಕಲೆಗಳು ಕಂಡು ಬಂದಿದ್ದು, ಅದನ್ನು ತಜ್ಞರು ಸಂಗ್ರಹಿಸಿರುತ್ತಾರೆ. ಮಹಜರಿನಲ್ಲಿ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ತಜ್ಞರ ಹೇಳಿಕೆಯನ್ನು ಅಥವಾ ಅವರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗದೇ ಠಾಣೆಯಲ್ಲಿಯೇ ಕುಳಿತು ಎಲ್ಲಾ ದಾಖಲಗೆಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ತಯಾರಿಸಿದಂತಹ ದಾಖಲೆಗಳಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖೆ ಮುಂದುವರಿಸಲು ನನಗೆ ಲಿಖಿತವಾಗಿ ತಿಳಿಸಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದ ತನಿಖೆ ಮಾಡಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಹೆಚ್.ಆರ್.ಕೆ. 2 ನೇ ಆರೋಪಿ ಪರ ವಕೀಲರಿಂದಃ

ತಕ್ಷೀರು ಸ್ಥಳದ ಸುತ್ತಮುತ್ತಲೂ ಸಾಕಷ್ಟು ಅಂಗಡಿಗಳು ಮತ್ತು ಮನೆಗಳು ಇರುತ್ತದೆ ಎಂದರೆ ಸರಿಯಲ್ಲ. ಸುಮಾರು 150 ಮೀಟರ್ ದೂರದಲ್ಲಿ ಇರುತ್ತದೆ. ಸಾಮಾನ್ಯವಾಗಿ ದೂರನ್ನು ಸ್ಥಳೀಯರು ನೀಡುತ್ತಾರೆ ಎಂದರೆ ಸರಿಯಲ್ಲ. ಯಾರೂ ಬೇಕಾದರೂ ನೀಡಬಹುದು. ಈ ಪ್ರಕರಣದಲ್ಲಿ 60 ಕಿಲೋ ಮೀಟರ್ ದೂರದಲ್ಲಿ ಇರುವಂತಹ ಫಿರ್ಯಾದುದಾರರನ್ನು ಕರೆಸಿ, ದೂರನ್ನು ಪಡೆಯಲು ಕಾರಣ ಏನು ಎಂದು ಪ್ರಶ್ನಿಸಿದ್ದಲ್ಲಿ , ಫಿರ್ಯಾದುದಾರರು ಸೂಪರ್ ವೈಸರ್ ಆದ ಕಾರಣ, ಅವರೇ ದೂರನ್ನು ನೀಡಿದ್ದಾರೆ. ಸ್ಥಳೀಯರು ಸಿಗದ

ಕಾರಣ ಫಿರ್ಯಾದುದಾರರನ್ನು ಕರೆಸಲಾಗಿದೆ ಎಂದು ಯಾವುದೇ ದಾಖಲೆಗಳಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಮಹಜರು, ನಕಾಶೆ ಮಾಡಿರುವುದಿಲ್ಲ ಅಥವಾ ಫೋಟೋಗಳನ್ನು ತೆಗೆದಿರುವುದಿಲ್ಲ, ಪಂಚರು ಸ್ಥಳಕ್ಕೆ ಬಂದಿರುವುದಿಲ್ಲ. ನಾನು ಚಾಸಾ 2 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಥವಾ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಅಪಘಾತಕ್ಕೂ ಮತ್ತು 2 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.